ಓ.ಎಸ್. ನಂ. 55/2018

ಪಿ.ಡಬ್ಲ್ಯೂ: 02 ರೇವಣ್ಣಸಿದ್ದಪ್ಪ

ದಿನಾಂಕಃ 26.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ ಟಿ.ಎಸ್.ಎಂ ವಕೀಲರಿಂದ.**

ದಾವೆಯನ್ನು ಸುರೇಶ್ ರವರು ಕೊಟ್ರುಬಸಮ್ಮ ರವರ ವಿರುದ್ದ ಸಲ್ಲಿಸಿರುತ್ತಾರೆ. ಆಕೆಯ ಗಂಡನ ಹೆಸರು ಗೊತ್ತಿಲ್ಲ. ಆಕೆ ಹುಣಸೆಕಟ್ಟೆ ಗ್ರಾಮದವಳು. ದಾವೆಯನ್ನು ಕಣದ ಸಂಬಂಧವಾಗಿ ಸಲ್ಲಿಸಿರುತ್ತಾರೆ. ಅದನ್ನು ಅವರು ಆಕೆಯಿಂದ ಖರೀದಿ ಮಾಡಿದ ಕಾರಣ ಸಲ್ಲಿಸಿರುತ್ತಾರೆ.

ಅದನ್ನು ಅವರು 1,10,000/- ರೂ. ಗೆ ಖರೀದಿ ಮಾಡಿ, 1,00,000/- ಮುಂಗಡವಾಗಿ ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ನೋಂದಾಯಿತ ಖರೀದಿ ಪತ್ರವನ್ನು ಕೊಟ್ರುಬಸಮ್ಮರವರು ಕೊಟ್ಟಿರುತ್ತಾರೆ. ಅದನ್ನು 5-6 ವರ್ಷಗಳ ಹಿಂದೆ ಕೊಟ್ರುಬಸಮ್ಮರವರು ಹೆಬ್ಬೆಟ್ಟು ಹಾಕಿ ಬರೆದುಕೊಟ್ಟಿರುತ್ತಾರೆ. ನಾನು ಸುರೇಶ್ ಹಾಗೂ ಕೊಟ್ರುಬಸಮ್ಮನವರ ನಡುವೆ ನಡೆದ ವ್ಯವಹಾರದ ಬಗ್ಗೆ ಸಾಕ್ಷ ನುಡಿಯುತ್ತಿದ್ದೇನೆ. ಆ ಸಮಯದಲ್ಲಿ ಸುರೇಶ್, ಕೊಟ್ರುಬಸಮ್ಮ, ಜಗದೀಶ್ ಮತ್ತು ಕರಿಬಸಪ್ಪ ಹಾಗೂ ನಾನು ಮಾತ್ರ ಇದ್ದೇವು. ಹಣವನ್ನು ನಗದಾಗಿ ನೀಡಿರುತ್ತಾರೆ. ಆ ದಿನ ಸುರೇಶ್ ರವರು ಕೊಟ್ರುಬಸಮ್ಮನವರಿಗೆ ಹಣ ನೀಡಿದ್ದರು ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

ಪ್ರಮಾಣ ಪತ್ರ ಬರೆಸಲು ಮಾಹಿತಿ ನಾನೇ ವಕೀಲರಿಗೆ ಹೇಳಿರುತ್ತೇನೆ. ವ್ಯವಹಾರ ಯಾರ ನಡುವೆ ನಡೆದಿತ್ತು ಎಂದು ಹೇಳಿ ಬರೆಸಿರುತ್ತೇನೆ. ನಾನು ಪ್ರಮಾಣ ಪತ್ರದಲ್ಲಿ ಕೊಟ್ರುಬಸಮ್ಮ ಹಾಗೂ ಸುರೇಶ್ ನಡುವೆ ವ್ಯವಹಾರ ಆಗಿದೆ ಎಂದು ಹೇಳಿ ಬರೆಸಿರುತ್ತೇನೆ. ನಾನು ಹೇಳಿರುವ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪತ್ರ ನೋಂದಾಯಿತವಾಗಿದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ಕಣದ ಜಾಗ ಆಗಿರುತ್ತದೆ. ದಾವಾ ಸ್ವತ್ತು ಗುರುಬಸವರಾಜರವರ ಸ್ವಾಧೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಆತ ಖರೀದಿ ಮಾಡಿರುತ್ತಾನೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ವಾದಿ ನನ್ನ ಗ್ರಾಮದರು ಹಾಗೂ ನನ್ನ ಸ್ನೇಹಿತರು. ಕರಾರು ಪತ್ರ ಎಷ್ಟು ದಿನದೊಳಗೆ ನೋಂದಾಣಿ ಮಾಡಿಸಿಕೊಡಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ನನಗೆ ಸ್ನೇಹಿತನಾದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಮುಕ್ತಾಯ.

ಮರುವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,ಕೂಡ್ಲಿಗಿ.

ಓ.ಎಸ್. ನಂ. 55/2018
ಪಿ.ಡಬ್ಲ್ಯು: 02 ರೇವಣ್ಣಸಿದ್ದಪ್ಪ